ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
UNIVERSITY OF HORTICULTURAL SCIENCES, BAGALKOT
I.C.A.R. - KRISHI VIGYAN KENDRA, KOLAR
ಐ.ಸಿ.ಎ.ಆರ್– ಕೃಷಿ ವಿಜ್ಞಾನ ಕೇಂದ್ರ, ಕೋಲಾರ
e-NEWS LETTER / ಇ–ವಾರ್ತಾ ಪತ್ರಿಕೆ

ಸಂಪುಟ – 4 | ಜನವರಿ – ಜೂನ್, 2016 | ಸಂಚಿಕೆ – 1

## ಗೌರವಾನ್ವಿತ ಕುಲಪತಿಗಳ ನುಡಿಗಳು



ಡಾ. ಡಿ. ಎಲ್. ಮಹೇಶ್ವರ್

ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಭಾರತ ಸರ್ಕಾರದ ಕಾರ್ಯಕ್ರಮಗಳಾದ ಸಸ್ಯ ತಳಿಗಳ ರಕ್ಷಣೆ ಮತ್ತು ರೈತ ಹಕ್ಕುಗಳ ಕಾಯ್ದೆ 2001 ಕಾರ್ಯಾಗಾರ, ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಯ ರೈತ ಸಮಾವೇಶ ಮತ್ತು ಕೃಷಿ ವಸ್ತು ಪ್ರದರ್ಶನ ಕಾರ್ಯಕ್ರಮಗಳನ್ನು ಜಿಲ್ಲೆಯ ರೈತರಿಗೆ ಅರಿವು ಮೂಡಿಸಲು ಹಮ್ಮಿಕೊಂಡಿರುವುದು ಸಂತೋಷವಾಗಿದೆ. ಇತ್ತೀಚಿನ ಕೃಷಿ ಅಭಿಯಾನ ಕಾರ್ಯಕ್ರಮ ಮತ್ತು ರೈತರ ಸಮಸ್ಯಾತ್ಮಕ ಕ್ಷೇತ್ರಗಳಿಗೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭೇಟಿ ನೀಡಿ ರೈತರ ಸಮಸ್ಯೆಗಳಿಗೆ ಸೂಕ್ತ ತಾಂತ್ರಿಕತೆಗಳನ್ನು ನೀಡುತ್ತಿರುವುದು, ಜಾನುವಾರುಗಳ ರಕ್ಷಣೆಗಾಗಿ ಪಶುಚಿಕಿತ್ಸಾ ಶಿಬಿರಗಳನ್ನು ಆಯೋಜಿಸಿ ರೈತರಿಗೆ ಅರಿವು ಮೂಡಿಸುತ್ತಿರುವುದು ಅಭಿನಂದನೀಯ.

## ತಂತ್ರಜ್ಞಾನ ಸಪ್ತಾಹ–2016



ಕೋಲಾರ ಜಿಲ್ಲೆಯ ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ದಿನಾಂಕ 11.01.2016 ರಿಂದ 16.01.2016 ರವರೆಗೆ **"ತಂತ್ರಜ್ಞಾನ ಸಪ್ತಾಹ–2016"** ಕಾರ್ಯಕ್ರಮವನ್ನು ಕೃಷಿ, ತೋಟಗಾರಿಕೆ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೋಲಾರ ಇವರ ಸಹಭಾಗಿತ್ವದಲ್ಲಿ ಆಯೋಜಿಸಲಾಗಿತ್ತು. ಕೋಲಾರದ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಡಾ. ಎಂ.ಎಸ್ ರಾಜುರವರು ಉದ್ಘಾಟನೆ ನೆರವೇರಿಸಿ ತಂತ್ರಜ್ಞಾನ ಸಪ್ತಾಹಕ್ಕೆ ಚಾಲನೆ ನೀಡಿದರು. ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥರಾದ ಕೆ. ತುಳಸಿರಾಮ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೋಲಾರದ ರೇಷ್ಮೆ ಇಲಾಖೆ ಉಪನಿರ್ದೇಶಕರಾದ ಶ್ರೀ. ಎಸ್.ವಿ. ಕುಮಾರ್ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಪನಿರ್ದೇಶಕರಾದ ಶ್ರೀ ಆಯುಬ್‌ಶರಿ ಭಾಗವಹಿಸಿದ್ದರು. ತಂತ್ರಜ್ಞಾನ ಸಪ್ತಾಹದಲ್ಲಿ ಮಾವು ಬೆಳೆಯ ಸುಧಾರಿತ ತಂತ್ರಜ್ಞಾನ ಹಾಗೂ ರಫ್ತು ಮಾಡಲು ಅನುಸರಿಸಬೇಕಾದ ಕ್ರಮಗಳು, ಪ್ರಮುಖ ತೋಟಗಾರಿಕಾ ಬೆಳೆಗಳ ಸುಧಾರಿತ ಬೇಸಾಯ ಹಾಗೂ ಸಮಗ್ರ ಪೀಡೆ ನಿರ್ವಹಣೆ, ಹಿಪ್ಪುನೇರಳೆ ಮರ ಬೇಸಾಯ ಹಾಗೂ ದ್ವಿತಳಿ ರೇಷ್ಮೆಹುಳು ಸಾಕಾಣಿಕಾ ತಾಂತ್ರಿಕತೆಗಳು, ಮಕ್ಕಳ ಆರೋಗ್ಯ ನಿರ್ವಹಣೆಯಲ್ಲಿ ಪೋಷಕಾಂಶಗಳ ಮಹತ್ವ ಹಾಗೂ ಕಲಿಕಾ ಸಾಮಗ್ರಿಗಳ ಬಗ್ಗೆ ಅರಿವು, ಹಲಸು ಮತ್ತು ಪಪ್ಪಾಯ ಹಣ್ಣುಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧಿತ ಪದಾರ್ಥಗಳು ಬಗ್ಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳಾದ ಕೆ. ತುಳಸಿರಾಮ್, ಡಾ. ಆರ್.ಎಲ್. ರಘುನಾಥರೆಡ್ಡಿ, ಡಾ. ಶಶಿಧರ್ ಕೆ.ಆರ್., ಡಾ. ನಾಗರಾಜ ಕೆ.ಎಸ್., ಡಾ. ಸಂತೋಷ ಹೆಚ್.ಎಂ., ಡಾ. ದೀಪಾ ತೇರದಾಳ, ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಸದಾನಂದ ಮುಶ್ರೀಫ್, ಡಾ. ವಾಸುದೇವ್ ಕೆ.ಆರ್, ಡಾ. ಅಮರನಂಜುಂಡೇಶ್ವರ, ಡಾ. ದೊಡ್ಡಬಸಪ್ಪ, ಡಾ. ಮಂಜುನಾಥ ರೆಡ್ಡಿ ಹಾಗೂ ಶ್ರೀ ದೇವರಾಜ ಅರಸ್ ಮೆಡಿಕಲ್ ಕಾಲೇಜಿನ ಆಹಾರ ತಜ್ಞರಾದ ಡಾ. ಮಾಧವಿ ರೆಡ್ಡಿರವರು ಭಾಗವಹಿಸಿ ತಾಂತ್ರಿಕ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸುಮಾರು 250 ರೈತ ಮತ್ತು ರೈತಮಹಿಳೆಯರು, ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.

## ಸಸ್ಯ ತಳಿಗಳ ರಕ್ಷಣೆ ಮತ್ತು ರೈತ ಹಕ್ಕುಗಳ ಕಾಯ್ದೆ 2001 ಕಾರ್ಯಾಗಾರ

ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ, ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಸಸ್ಯ ತಳಿಗಳ ರಕ್ಷಣೆ ಮತ್ತು ರೈತ ಹಕ್ಕುಗಳ ಪ್ರಾಧಿಕಾರ, ನವದೆಹಲಿ ಸಂಯುಕ್ತಶ್ರಾಯದಲ್ಲಿ **"ಸಸ್ಯ ತಳಿಗಳ ರಕ್ಷಣೆ ಮತ್ತು ರೈತ ಹಕ್ಕುಗಳ ಕಾಯ್ದೆ 2001"** ಕುರಿತು ರೈತರಲ್ಲಿ ಅರಿವು ಮೂಡಿಸುವ ಕಾರ್ಯಾಗಾರವನ್ನು ದಿನಾಂಕ 29.01.2016 ರಂದು ತೋಟಗಾರಿಕೆ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಭಾರತ ಸರ್ಕಾರದ ಸಸ್ಯ ತಳಿ ರಕ್ಷಣೆ ಮತ್ತು ರೈತ ಹಕ್ಕು ಪ್ರಾಧಿಕಾರ, ನವದೆಹಲಿಯ ಮುಖ್ಯಸ್ಥರಾದ ಡಾ. ಆರ್. ಆರ್. ಹಂಚಿನಾಳರವರು ಕಾರ್ಯಾಗಾರವನ್ನು ಉದ್ಘಾಟಿಸಿ ದೇಶದಲ್ಲಿ ಸುಮಾರು 49 ಸಾವಿರ ಸಸ್ಯ ಪ್ರಭೇದಗಳಿದ್ದು ದೇಶವು ಸಸ್ಯ ಮತ್ತು ಜೀವ ವೈವಿಧ್ಯತೆಯ ದೊಡ್ಡ ಖಜಾನೆಯಾಗಿದೆ, ಸಸ್ಯ ತಳಿಗಳ ನೊಂದಣಿ ಮಾಡಿಸುವುದರಿಂದ ತಳಿಗಳ ರಕ್ಷಣೆ ಮತ್ತು ಅಭಿವೃದ್ಧಿಪಡಿಸಿದವರಿಗೆ ಆರ್ಥಿಕವಾಗಿ ಲಾಭವಾಗುತ್ತದೆ ಎಂದು ತಿಳಿಸಿದರು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ವಿಸ್ತರಣಾ ನಿರ್ದೇಶಕರಾದ ಡಾ. ಎ.ಬಿ. ಪಾಟೀಲರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕೋಲಾರದ ರೈತರು ಅತೀ ಕಡಿಮೆ ನೀರಿನಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ತೋಟಗಾರಿಕೆ, ರೇಷ್ಮೆ ಹಾಗೂ ಹಾಲು ಉತ್ಪಾದನೆ ಮಾಡುತ್ತಿದ್ದು, ಹೆಚ್ಚು ಆದಾಯ ಗಳಿಸುತ್ತಿದ್ದಾರೆಂದು ತಿಳಿಸಿದರು.





ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ನಿರಂಜನಮೂರ್ತಿ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸಮರ್ಥ ಬೆಳೆಗಳ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಡಾ. ಆರ್. ಸಿದ್ದರಾಜು, ಪ್ರಾಧ್ಯಾಪಕರು, ರಾಷ್ಟ್ರೀಯ ಬೀಜ ಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಭಾಗವಹಿಸಿ ರೈತರಿಗೆ ತಾಂತ್ರಿಕ ಮಾಹಿತಿ ನೀಡಿದರು. ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಡಾ. ಟಿ.ವಿ. ಮುನಿಯಪ್ಪರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಡೀನ್‌ರಾದ ಡಾ. ವಿ. ನಾಚೇಗೌಡರವರು ವಹಿಸಿದ್ದರು. ಕಾರ್ಯಾಗಾರದಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖಾ ಹಿರಿಯ ಅಧಿಕಾರಿಗಳು, ತೋಟಗಾರಿಕೆ ಮಹಾವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಬೋಧಕ ಸಿಬ್ಬಂದಿಗಳು, ಸುಮಾರು 100 ಮಂದಿ ರೈತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

## ಪ್ರಮುಖ ತೋಟಗಾರಿಕೆ ಮತ್ತು ಖುಷ್ಕಿ ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ ತಾಂತ್ರಿಕ ತರಬೇತಿ ಕಾರ್ಯಕ್ರಮ






ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಹಾಗೂ ಕೇಂದ್ರಿಯ ಸಮಗ್ರ ಪೀಡೆ ನಿರ್ವಹಣಾ ಕೇಂದ್ರ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಕೋಲಾರ ಜಿಲ್ಲೆಯ ರೈತ ಮತ್ತು ರೈತ ಮಹಿಳೆಯರಿಗೆ **"ಪ್ರಮುಖ ತೋಟಗಾರಿಕೆ ಮತ್ತು ಖುಷ್ಕಿ ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ"** ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ದಿನಾಂಕ 11.03.2016 ಮತ್ತು 12.03.2016 ರಂದು ಆಯೋಜಿಸಲಾಗಿತ್ತು. ಬೆಂಗಳೂರಿನ ಕೇಂದ್ರಿಯ ಸಮಗ್ರ ಪೀಡೆ ನಿರ್ವಹಣಾ ಕೇಂದ್ರದ ಉಪ ನಿರ್ದೇಶಕರಾದ ಡಾ. ಸಿ. ಇಳಂಗೋವನ್ ಉದ್ಘಾಟನೆ ನೆರವೇರಿಸಿ ಸಮಗ್ರ ಪೀಡೆ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಸೂಕ್ತ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕಾ ಮಹಾವಿದ್ಯಾಲಯ ಡೀನ್‌ರಾದ ಡಾ. ವಿ. ನಾಚೇಗೌಡರವರು ಸಮಗ್ರ ಪೀಡೆ ನಿರ್ವಹಣಾ ಕ್ರಮಗಳನ್ನು ಸೂಕ್ತ ರೀತಿ ಅನುಸರಿಸಿದಲ್ಲಿ ಪರಿಣಾಮಕಾರಿಯಾಗಿ ಪೀಡೆಗಳನ್ನು ನಿಯಂತ್ರಿಸಿ ಅಧಿಕ ಬೆಳೆ ಇಳುವರಿ ಪಡೆಯಬಹುದೆಂದು ತಿಳಿಸಿದರು. ತಾಂತ್ರಿಕ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್ ತೋಟಗಾರಿಕೆ ಮತ್ತು ಖುಷ್ಕಿ ಬೆಳೆಗಳ ಸಮಗ್ರ ಪದ್ಧತಿಯ ಕೀಟ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಕೇಂದ್ರ ಸಮಗ್ರ ಪೀಡೆ ನಿರ್ವಹಣೆ ಕೇಂದ್ರ ಬೆಂಗಳೂರಿನ ತಂತ್ರಜ್ಞರಾದ ಆರ್. ಎಸ್. ಶಶಿಕುಮಾರ್ ಮತ್ತು ಎಂ.ಕೆ. ಪ್ರಭಾವತಿರವರು ಜೈವಿಕ ಪದ್ಧತಿಯ ಮಹತ್ವ, ಉತ್ಪಾದನೆ ಮತ್ತು ಕೀಟನಾಶಕಗಳ ಬಳಕೆಯಲ್ಲಿ ಮುಂಜಾಗ್ರತಾ ಕ್ರಮಗಳು ಬಗ್ಗೆ ಮಾಹಿತಿ ನೀಡಿದರು. ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಂಜುನಾಥ ರೆಡ್ಡಿ, ಡಾ. ಸದಾನಂದ ಮುಶ್ರೀಫ್ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಹೊಗಳಗೆರೆಯ ವಿಜ್ಞಾನಿಯಾದ ಡಾ. ಅಶ್ವತ್ಥನಾರಾಯಣರೆಡ್ಡಿ ರವರು ಪ್ರಮುಖ ತರಕಾರಿ, ಖುಷ್ಕಿ ಮತ್ತು ಹೂವಿನ ಬೆಳೆಗಳಲ್ಲಿ ಕೀಟ ಮತ್ತು ರೋಗ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಹಿಪ್ಪುನೇರಳೆಯ ಪ್ರಮುಖ ಪೀಡೆಗಳ ನಿರ್ವಹಣೆ ಬಗ್ಗೆ ರೇಷ್ಮೆಕೃಷಿ ವಿಷಯ ತಜ್ಞರಾದ ಡಾ. ಶಶಿಧರ್ ಕೆ.ಆರ್. ಮಾಹಿತಿಯನ್ನು ನೀಡಿದರು. ಜಿಲ್ಲೆಯ ವಿವಿಧ ಗ್ರಾಮಗಳಿಂದ ಸುಮಾರು 55 ರೈತ ಮತ್ತು ರೈತಮಹಿಳೆಯರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.

## ತರಬೇತಿ ಕಾರ್ಯಕ್ರಮ

ತೋಟಗಾರಿಕೆ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ **"ತಾರಸಿ ಮತ್ತು ಕೈತೋಟ"** ತರಬೇತಿ ಕಾರ್ಯಕ್ರಮವನ್ನು ಕೋಲಾರ ನಗರದ ಶಂಕರಮಠ ಮತ್ತು ಸಹಕಾರ ನಗರ ಬಡಾವಣೆಯಲ್ಲಿ ದಿನಾಂಕ 12.3.2016 ರಂದ ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರ ಕೋಲಾರದ ತೋಟಗಾರಿಕೆ ವಿಷಯ ತಜ್ಞರಾದ ಡಾ. ನಾಗರಾಜ ಕೆ.ಎಸ್. ರವರು ಭಾಗವಹಿಸಿ ತಾರಸಿ ತೋಟಕ್ಕೆ ಸೂಕ್ತವಾದ ತರಕಾರಿ ಬೆಳೆಗಳು ಮತ್ತು ಅವುಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಎಂ.ಎಸ್ ರಾಜು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಹಾಲಲಿಂಗಯ್ಯರವರು ತಾರಸಿ ತೋಟ ಮತ್ತು ಕೈತೋಟ ನಿರ್ವಹಣೆ ಬಗ್ಗೆ ತಾಂತ್ರಿಕ ಮಾಹಿತಿಯನ್ನು ನೀಡಿದರು. ಸುಮಾರು 60 ನಗರ ವಾಸಿಗಳು ಇದರ ಸದುಪಯೋಗವನ್ನು ಪಡೆದುಕೊಂಡರು.





ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಗೆ **"ಹಲಸಿನ ಹಣ್ಣಿನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ"** ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.05.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರದಲ್ಲಿ ಹಮ್ಮಿಕೊಳ್ಳಲಾಯಿತು. ಡಾ. ಚಿಕ್ಕಣ್ಣ ಜಿ.ಎಸ್, ವಿಷಯ ತಜ್ಞರು (ಗೃಹ ವಿಜ್ಞಾನ) ಮತ್ತು ಶ್ರೀಮತಿ. ಜಯಲಕ್ಷ್ಮೀ ಪವಾರ್ ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ ವಿಸ್ತರಣೆ), ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ ಇವರು ಹಲಸಿನ ಹಣ್ಣನ್ನು ಸಂಸ್ಕರಿಸಿ ತಯಾರು ಮಾಡಬಹುದಾದ ಹಲ್ವ, ಚಿಪ್ಸ್, ಕ್ಯಾಂಡಿ, ಜ್ಯೂಸ್, ಬರ್ಫಿ, ಹಲಸಿನ ಚಿಪ್ಸ್, ಹಲಸಿನ ಜಾಮ್, ಹಲಸಿನ ಸ್ಕ್ವಾಷ್ ಮತ್ತು ಐಸ್‌ಕ್ರೀಮ್ ಮುಂತಾದವುಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡುವುದರ ಮೂಲಕ ತಿಳಿಸಿಕೊಟ್ಟರು. ಅನುವುಗಾರರಾದ ಶ್ರೀಮತಿ ಪ್ರಮೀಳಾ ಮತ್ತು 25 ಸ್ವಸಹಾಯ ಸಂಘ ಮಹಿಳಾ ಸದಸ್ಯರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.

ಮುಳಬಾಗಿಲು ತಾಲೂಕಿನ ಬುಡದೇರೂ ಗ್ರಾಮದಲ್ಲಿ ದಿನಾಂಕ 11.06.2016 ರಂದು **"ನೆಲಗಡಲೆಯಲ್ಲಿ ಸೂಕ್ಷ್ಮ ಪೋಷಕಾಂಶಗಳ ಮಹತ್ವ ಮತ್ತು ಮಣ್ಣಿನ ಫಲವತ್ತತೆಯ ನಿರ್ವಹಣೆ"** ತರಬೇತಿ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರ ಕೋಲಾರದ ವತಿಯಿಂದ ಆಯೋಜಿಸಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್ ರವರು ನೆಲಗಡಲೆಗೆ ಬರುವ ಪ್ರಮುಖ ಕೀಟಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಆರ್. ಎಲ್. ರಘುನಾಥರೆಡ್ಡಿ (ಮಣ್ಣು ವಿಜ್ಞಾನಿಗಳು) ಮಣ್ಣಿನ ಪರೀಕ್ಷೆ ಮತ್ತು ಬೀಜೋಪಚಾರದ ಮಹತ್ವವನ್ನು ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿಕೊಟ್ಟರು. ಸುಮಾರು 30 ರೈತರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





ದಿನಾಂಕ **28.06.2016** ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ **"ನೆಲ್ಲಿಕಾಯಿಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆ"** ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಗೆ ನೀಡಲಾಯಿತು. ಕ್ಯಾಂಡಿ, ಜ್ಯೂಸ್, ಸ್ಕ್ಯಾಷ್, ನೆಕ್ಟಾರ್, ಸುಫಾರಿ, ಉಪ್ಪಿನಕಾಯಿ, ಚಟ್ನಿ, ಪೌಡರ್ ಮತ್ತು ಜಾಮ್ ಮುಂತಾದವುಗಳ ಬಗ್ಗೆ ವಿಷಯ ತಜ್ಞರಾದ ಡಾ. ಚಿಕ್ಕಣ್ಣ ಜಿ.ಎಸ್. ವಿಜ್ಞಾನಿ (ಗೃಹ ವಿಜ್ಞಾನ) ಮತ್ತು ಅನುವುಗಾರರಾದ ಶ್ರೀಮತಿ ಭಾಗ್ಯ ಇವರು ಪ್ರಾತ್ಯಕ್ಷೀಕೆ ಮೂಲಕ ತಿಳಿಸಿಕೊಟ್ಟರು. ತೋಟಗಾರಿಕೆ ಮಹಾವಿದ್ಯಾಲಯದ ಡೀನ್‌ರಾದ ಡಾ. ಕೆ.ಎನ್. ಶ್ರೀನಿವಾಸ್ ರವರು ಮುಖ್ಯ ಅತಿಥಿಗಳಾಗಿ ಬಾಗವಹಿಸಿ ನೆಲ್ಲಿಕಾಯಿಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಬಗ್ಗೆ ತಿಳಿಸಿಕೊಟ್ಟರು. ಸುಮಾರು 25 ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿ ಅದರ ಸದುಪಯೋಗವನ್ನು ಪಡೆದುಕೊಂಡರು.

## ಬೆಳೆ ವಿಚಾರ ಸಂಕಿರಣ

ದಿನಾಂಕ 17.06.2016 ಮತ್ತು 28.06.2016 ರಂದು ಶ್ರೀನಿವಾಸಪುರ ತಾಲ್ಲೂಕ್ಕಿನ ಗೌನಿಪಲ್ಲಿ ಗ್ರಾಮ ಹಾಗೂ ಚಿಂತಾಮಣಿ ತಾಲ್ಲೂಕಿನ ಚಾಕವೇಲು ಗ್ರಾಮದಲ್ಲಿ **"ಟೊಮ್ಯಾಟೊ ಬೆಳೆಯಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು"** ಒಂದು ದಿನದ ಬೆಳೆ ವಿಚಾರ ಸಂಕಿರಣವನ್ನು ಕೃಷಿ ವಿಜ್ಞಾನ ಕೇಂದ್ರ ಕೋಲಾರ ಮತ್ತು ಕೋರಮಂಡಲ ಫರ್ಟಿಲೈಜರ್ಸ್, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಡಾ. ನಾಗರಾಜ್ ಕೆ.ಎಸ್. ವಿಷಯ ತಜ್ಞರು (ತೋಟಗಾರಿಕೆ) ರವರು ಟೊಮ್ಯೊಟೊ ಬೆಳೆಯಲ್ಲಿ ಇತ್ತೀಚಿನ ನೂತನ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಕೋಲಾರದ ಮುಖ್ಯಸ್ಥರಾದ ಕೆ. ತುಳಸಿರಾಮ್ ಮತ್ತು ತೋಟಗಾರಿಕೆ ಮಹಾವಿದ್ಯಾಲಯದ ಕೀಟಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ದೊಡ್ಡಬಸಪ್ಪ ಟೊಮ್ಯಾಟೊ ಬೆಳೆಗೆ ಬರುವ ಕೀಟಗಳು ಮತ್ತು ಅವುಗಳ ಸಮಗ್ರ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಮಂಜುನಾಥರೆಡ್ಡಿ, ಸಹಾಯಕ ಪ್ರಾಧ್ಯಾಪಕರು (ಸಸ್ಯರೋಗ ಶಾಸ್ತ್ರ), ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಇವರು ಟೊಮ್ಯೊಟೊ ಬೆಳೆಗೆ ಬರುವ ರೋಗಗಳು ಮತ್ತು ಅವುಗಳ ಸಮಗ್ರ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸುಮಾರು 110 ರೈತರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗವ ಪಡೆದುಕೊಂಡರು.



## ತ್ರೈಮಾಸಿಕ ಕಾರ್ಯಾಗಾರ



ದಿ: 18.02.2016 ರಂದು ಕೋಲಾರದ ತೋಟಗಾರಿಕೆ ಮಹಾವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ ಮತ್ತು ತೋಟಗಾರಿಕೆ ಇಲಾಖೆ ಇವರ ಸಹಯೋಗದಲ್ಲಿ ತ್ರೈಮಾಸಿಕ ಕಾರ್ಯಾಗಾರವನ್ನು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರುಗಳು, ಎಲ್ಲಾ ತಾಲ್ಲೂಕಿನ ಸಹಾಯಕ ತೋಟಗಾರಿಕೆ ಇಲಾಖೆಯ ನಿರ್ದೇಶಕರುಗಳು ಮತ್ತು ತೋಟಗಾರಿಕೆ ಅಧಿಕಾರಿಗಳು ಭಾಗವಹಿಸಿದ್ದರು. ಡೀನ್‌ರಾದ ಡಾ. ವಿ. ನಾಚೆಗೌಡರವರು ಅಧ್ಯಕ್ಷತೆ ವಹಿಸಿ ಬೇಸಿಗೆ ಕಾಲದಲ್ಲಿ ಹಣ್ಣು ಬೆಳೆಗಳಿಗೆ ಕೈಕೊಳ್ಳಬೇಕಾದ ಸೂಕ್ತ ನಿರ್ವಹಣಾ ಕ್ರಮಗಳ ಬಗ್ಗೆ ಚರ್ಚಿಸಿದರು. ಕೋಲಾರ ತಾಲ್ಲೂಕಿನ ಸಹಾಯಕ ತೋಟಗಾರಿಕೆ ನಿರ್ದೇಶಕರಾದಂತಹ ಶ್ರೀ ಹಾಲಲಿಂಗಯ್ಯನವರು ಮಾವಿನ ಬೆಳೆಯ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಕೆ. ತುಳಸಿರಾಮ್ ಹಾಗೂ ಡಾ. ಮಂಜುನಾಥ ರೆಡ್ಡಿ ಇವರು ಪ್ರಮುಖ ತೋಟಗಾರಿಕೆ ಬೆಳೆಯಲ್ಲಿ ಬರುವ ಕೀಟ ಮತ್ತು ರೋಗಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ಹಲವಾರು ಸಹಾಯಕ ತೋಟಗಾರಿಕೆ ಅಧಿಕಾರಿಗಳು ತಂದಿರುವ ಬಾಧೆಗೊಳಗಾದ ವಿವಿಧ ಬೆಳೆಗಳ ಮಾದರಿಗಳನ್ನು ಚರ್ಚಿಸಿ ಸೂಕ್ತ ಪರಿಹಾರವನ್ನು ನೀಡಲಾಯಿತು.

## ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಕಾರ್ಯಾಗಾರ 2016–17

ದಿನಾಂಕ 06.04.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರವು **"ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ"**ಯ ಅರಿವು ಮೂಡಿಸುವ ರೈತ ಸಮಾವೇಶ ಮತ್ತು ಕೃಷಿ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ತೋಟಗಾರಿಕೆ ಮಹಾವಿದ್ಯಾಲಯ ಆವರಣ, ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಕೆ.ಎಚ್.ಮುನಿಯಪ್ಪರವರು ರೈತ ಸಮಾವೇಶವನ್ನು ಉದ್ಘಾಟಿಸಿ ಬಯಲುಸೀಮೆ ಪ್ರದೇಶಗಳ 72 ತಾಲ್ಲೂಕುಗಳಿಗೆ ಈ ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಅಗತ್ಯವಾಗಿದ್ದು, ಬೆಳೆ ನಷ್ಟದಿಂದ ಸಂಕಷ್ಟಕ್ಕೊಳಗಾಗುವ ರೈತರಿಗೆ ಯೋಜನೆ ವರದಾನವಾಗಿದೆ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಡಾ. ಎ.ಬಿ. ಪಾಟೀಲ ವಿಸ್ತರಣಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರು ಇತ್ತೀಚಿನ ದಿನಗಳಲ್ಲಿ ಪ್ರತಿ ಬೆಳೆಯ



ಉತ್ಪಾದನಾ ವೆಚ್ಚವು ಹೆಚ್ಚಾಗುತ್ತಿದ್ದು, ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ ನಡೆಸಿ ಬೆಳೆಗಳಿಗೆ ತಕ್ಕಂತೆ ವಿಮೆಯನ್ನು ಈ ಹೊಸ ಯೋಜನೆಯಲ್ಲಿ ಅಳವಡಿಸಲಾಗಿದ್ದು ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು. ಡಾ. ಕೆ. ಜಗದೀಶ್ವರ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ನೂತನ ಬೆಳೆ ವಿಮೆ ಯೋಜನೆಯ ಉಪಯೋಗಗಳ ಬಗ್ಗೆ ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಪಿ.ಎಸ್. ಶ್ರೀಕಂಠಮೂರ್ತಿ, ಬೆಂಗಳೂರು ಅಗ್ರಿಕಲ್ಚರಲ್ ಇನ್ಶೂರೆನ್ಸ್ ಕಂಪನಿಯ ಉಪ ವ್ಯವಸ್ಥಾಪಕರಾದ ಶ್ರೀ. ಜೆ.ಎಮ್.ಎಸ್. ಅಹ್ಮದ್ ಇವರು ಬೆಳೆ ವಿಮೆ ಯೋಜನೆಯ ಸೌಲಭ್ಯಗಳು ಮತ್ತು ಉಪಯೋಗಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಟಿ.ವಿ. ಮುನಿಯಪ್ಪ, ಆಡಳಿತ ಮಂಡಳಿ ಸದಸ್ಯರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಕೋಲಾರ ಜಿಲ್ಲೆಯ ಕೃಷಿ, ತೋಟಗಾರಿಕೆ, ರೇಷ್ಮೆ, ಅರಣ್ಯ ಇಲಾಖೆಗಳ ಉಪನಿರ್ದೇಶಕರು ಭಾಗವಹಿಸಿದ್ದರು. ವಸ್ತು ಪ್ರದರ್ಶನ ಮಳಿಗೆಗಳನ್ನು ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳಾದ ಬ್ರೇಸ್ ಸ್ವಯಂ ದವಸಧಾನ್ಯಗಳ ಸಂಸ್ಥೆ, ಆರ್ಥಿಕ ಸಾಕ್ಷರತಾ ಕೇಂದ್ರ, ಕೆನರಾ ಬ್ಯಾಂಕ್ ಹಾಗೂ ಸಾಯಿ ಬೇನಕ ಫುಡ್ ಇಂಡಸ್ಟ್ರೀಸ್ ಇವರ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಸುಮಾರು 450 ರೈತ ಮತ್ತು ರೈತ ಮಹಿಳೆಯರು, ಸ್ವಸಹಾಯ ಸಂಘದ ಮಹಿಳೆಯರು ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.



## ಕೃಷಿ ಅಭಿಯಾನ 2016–17

ಇಲಾಖೆಗಳ ನಡಿಗೆ ರೈತರ ಬಾಗಿಲಿಗೆ ಎಂಬ ಧ್ಯೇಯ ವಾಕ್ಯದೊಂದಿಗೆ ಕೃಷಿಯನ್ನು ಹೆಚ್ಚು ಲಾಭದಾಯಕ, ಬೆಳೆ ವೈವಿಧ್ಯೀಕರಣ, ನೂತನ ತಾಂತ್ರಿಕತೆಗಳ ಅಳವಡಿಕೆ, ವ್ಯವಸಾಯದ ವೆಚ್ಚದಲ್ಲಿ ಕಡಿತ ಹಾಗೂ ಕೃಷಿಯೊಂದಿಗೆ ಪೂರಕ ಉಪಕಸುಬುಗಳಾದ ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆ, ಮುಂತಾದ ಚಟುವಟಿಕೆಗಳನ್ನು ರೈತರು ಅಳವಡಿಸಿಕೊಳ್ಳಲು ಏಕಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಸಮಗ್ರ ಕೃಷಿ ಮಾಹಿತಿಯನ್ನು ನೀಡಲು, ಕೃಷಿ ಇಲಾಖೆ ಮತ್ತು ಕೃಷಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಸಮೂಹ ಕಾರ್ಯಕ್ರಮವಾದ **"ಕೃಷಿ ಅಭಿಯಾನ"** ವನ್ನು ದಿ. 16.06.2016 ರಿಂದ 30.06.2016 ರವರೆಗೆ ಬಂಗಾರಪೇಟೆ, ಮಾಲೂರು ಮತ್ತು ಮುಳಬಾಗಿಲು ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಅವಧಿಯಲ್ಲಿ ಕೃಷಿ ವಸ್ತು ಪ್ರದರ್ಶನವನ್ನು ಮತ್ತು ಕ್ಷೇತ್ರ ಮಟ್ಟದಲ್ಲಿ ತಾಂತ್ರಿಕತೆಗಳನ್ನು ರೈತರು ಅಳವಡಿಸುವಾಗ ಎದುರಿಸುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಪರಿಹಾರವನ್ನು ಸೂಚಿಸಲು ರೈತರ ಸಂವಾದವನ್ನು ವಿಶ್ವವಿದ್ಯಾನಿಲಯದ ವಿಜ್ಞಾನಿಗಳೊಂದಿಗೆ ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮಗಳಲ್ಲಿ ಈ ಕೆಳಕಂಡಂತೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳು ಬಾಗವಹಿಸಿ ರೈತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರೈತರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರವನ್ನು ನೀಡಿದರು.

| ಸಂಖ್ಯೆ | ದಿನಾಂಕ | ಹೋಬಳಿ | ತಾಲ್ಲೂಕು | ಭಾಗವಹಿಸಿದ ವಿಜ್ಞಾನಿಗಳು |
|---|---|---|---|---|
| 1. | 18.06.2016 | ಕಸಬಾ(ಹಂಚಾಳ ಗೇಟ್) | ಬಂಗಾರಪೇಟೆ | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನಾಗರಾಜ್ ಕೆ.ಎಸ್ |
| 2. | 20.06.2016 | ಟೇಕಲ್ | ಮಾಲೂರು | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನಾಗರಾಜ್ ಕೆ.ಎಸ್ |
| 3. | 22.06.2016 | ಬೂದಿಕೋಟೆ (ಬಲಮಂದೆ) | ಬಂಗಾರಪೇಟೆ | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನಾಗರಾಜ್ ಕೆ.ಎಸ್ |
| 4. | 23.06.2016 | ಕಸಬಾ | ಮಾಲೂರು | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನಾಗರಾಜ್ ಕೆ.ಎಸ್ |
| 5. | 25.06.2016 | ಲಕ್ಕೂರು | ಮಾಲೂರು | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ಚಿಕ್ಕಣ್ಣ |
| 6. | 27.06.2016 | ಬೈರಕೂರು | ಮುಳಬಾಗಿಲು | ಡಾ. ನಾಗರಾಜ್ ಕೆ.ಎಸ್ |
| 7. | 29.06.2016 | ಮಾಸ್ತಿ,<br>ದುಗ್ಗಸಂದ್ರ | ಮಾಲೂರು,<br>ಮುಳಬಾಗಿಲು | ಡಾ. ರಘುನಾಥರೆಡ್ಡಿ ಆರ್.ಎಲ್<br>ಡಾ. ಶಶಿಧರ್ ಕೆ.ಆರ್, ಡಾ. ನಾಗರಾಜ್ ಕೆ.ಎಸ್ |
| 8. | 30.06.2016 | ವಕ್ಕಲೇರಿ,<br>ಆವಣಿ | ಕೋಲಾರ,<br>ಮುಳಬಾಗಿಲು | ಡಾ. ಚಿಕ್ಕಣ್ಣ, ಡಾ. ಸಂತೋಷ್ ಹೆಚ್. ಎಂ, ಶ್ರೀ. ಸುಭಾಷ್ |

## ಪಶು ಚಿಕಿತ್ಸಾ ಶಿಬಿರ



ದಿನಾಂಕ 23.01.2016, 05.02.2016 ಮತ್ತು 15.03.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಪಶು ಚಿಕಿತ್ಸಾಲಯ, ವಡಗೂರು ಇವರ ಸಹಯೋಗದಲ್ಲಿ ನೆರ್ನಹಳ್ಳಿ, ನಡುಪಳ್ಳಿ ಮತ್ತು ತಿಪ್ಪಸಂದ್ರ ಗ್ರಾಮಗಳಲ್ಲಿ **"ಪಶು ಚಿಕಿತ್ಸಾ ಶಿಬಿರ"** ಗಳನ್ನು ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಸುಮಾರು 180 ಹಸು, ಎಮ್ಮೆ ಕರುಗಳಿಗೆ ಮತ್ತು 890 ಕುರಿಗಳಿಗೆ ಜಂತು ನಾಶಕ ಔಷಧಿ ವಿತರಿಸಲಾಯಿತು. ಸುಮಾರು 35 ರಾಸುಗಳಿಗೆ ಬಂಜೆತನ ನಿವಾರಣೆ ಚಿಕಿತ್ಸೆ ಹಾಗೂ



60 ರಾಸುಗಳಿಗೆ ಹಾಲಿನಲ್ಲಿ ಕಬ್ಬಿಣಾಂಶ ಹಾಗೂ ಡಿಗ್ರಿ ತಪಾಸಣೆ ಮಾಡಲಾಗಿ ಭಾದೆಗೊಳಪಟ್ಟ ರಾಸುಗಳಿಗೆ ಲವಣ ಮಿಶ್ರಿತ ಪುಡಿಯನ್ನು ನೀಡಲಾಯಿತು. ಗ್ರಾಮಗಳಲ್ಲಿ ಇರುವ ಎಲ್ಲ ಹಸು, ಎತ್ತು ಮತ್ತು ಎಮ್ಮೆಗಳಿಗೆ ಹೊರ ಪರಾವಲಂಬಿ (ಬೂಟಾಕ್ಸ್ ಸ್ಪ್ರೇ) ಔಷಧಿ ಸಿಂಪಡಿಸಲಾಯಿತು. ಸುಮಾರು 70 ರಾಸುಗಳಿಗೆ ಸಾಮಾನ್ಯ ತಪಾಸಣೆ ಮತ್ತು ಇನ್ನಿತರ ಖಾಯಿಲೆಗಳಿಗೆ ಔಷಧಿ ನೀಡಲಾಯಿತು. ಡಾ. ಎನ್. ನಾಗಣ್ಣ ಹಿರಿಯ ಪಶು ವೈದ್ಯಾಧಿಕಾರಿಗಳು, ಪಶು ಚಿಕಿತ್ಸಾಲಯ, ವಡಗೂರು ಮತ್ತು ಸಿಬ್ಬಂದಿಗಳು ಶಿಬಿರದಲ್ಲಿ ಭಾಗವಹಿಸಿ ಪಶು ತಪಾಸಣೆ ನಡೆಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್, ವಿಷಯ ತಜ್ಞರಾದ ಡಾ. ಶಶಿಧರ್. ಕೆ.ಆರ್, ಡಾ. ಸಂತೋಷ್ ಹೆಚ್. ಎಂ. ಡಾ. ಕೆ.ಎಸ್. ನಾಗರಾಜ, ಡಾ. ರಘುನಾಥರೆಡ್ಡಿ ಆರ್.ಎಲ್ ಹಾಗೂ ಉಮೇಶ ನಾಯ್ಕ್ ಭಾಗವಹಿಸಿ ಪಶು ಚಿಕಿತ್ಸಾ ಶಿಬಿರದ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಗ್ರಾಮಸ್ಥರು ಭಾಗವಹಿಸಿ ಪಶು ಆರೋಗ್ಯ ಶಿಭಿರದ ಸದುಪಯೋಗವನ್ನು ಪಡೆದುಕೊಂಡರು.

## ಗುಂಪು ಚರ್ಚೆ



ದಿನಾಂಕ 13.05.2016 ರಂದು ಕೋಲಾರ ತಾಲ್ಲೂಕಿನ ಬಳಗೆರೆ, ಶೆಟ್ಟಿಮಾದಮಂಗಲ, ಮುಳ್ಳಹಳ್ಳಿ ಗ್ರಾಮಗಳಲ್ಲಿ ತೊಗರಿ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು, ಮಣ್ಣು ಪರೀಕ್ಷೆ ಮತ್ತು ಶಿಫಾರಸ್ಸು ಪ್ರಮಾಣದ ರಸಗೊಬ್ಬರ ಬಳಕೆಗೆ ಮತ್ತು ಬೀಜೋಪಚಾರ ಸಂಬಂಧಿಸಿದಂತೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ಗುಂಪು ಚರ್ಚೆ ಕಾರ್ಯಕ್ರಮವನ್ನು ಮಂಚೂಣಿ ಪ್ರಾತ್ಯಕ್ಷಿಕೆ ಅಳವಡಿಸಿಕೊಳ್ಳುವ ರೈತರಿಗೆ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಕಾರ್ಯಕ್ರಮ ಸಂಯೋಜಕರಾದ ಕೆ. ತುಳಸಿರಾಮ್, ವಿಜ್ಞಾನಿಗಳಾದ ಡಾ. ಸಂತೋಷ ಎಚ್.ಎಮ್. ಇವರು ಗುಂಪು ಚರ್ಚೆಯಲ್ಲಿ ಭಾಗವಹಿಸಿ ಮಾಹಿತಿಯನ್ನು ನೀಡಿದರು. ಸುಮಾರು 60 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದುಕೊಂಡರು.



ಮಾಲುರು ತಾಲ್ಲೂಕಿನ ಮಡಿವಾಳ ಮತ್ತು ಅಬ್ಬೇನಹಳ್ಳಿ ಗ್ರಾಮಗಳಲ್ಲಿ ದಿನಾಂಕ 15.06.2016 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ "ರಾಗಿ (ಕೆ.ಎಂ.ಆರ್–204) ತಳಿಯ ಕೀಟ ಮತ್ತು ರೋಗದ ನಿರ್ವಹಣೆ" ಮುಂಚೂಣಿ ಪ್ರಾತ್ಯೆಕ್ಷಿಕೆಗೆ ಸಂಬಂಧಿಸಿದಂತೆ ಗುಂಪು ಚರ್ಚೆಯನ್ನು ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಮುಖ್ಯಸ್ಥರಾದ ಕೆ. ತುಳಸಿರಾಮ್, ವಿಷಯ ತಜ್ಞರಾದ ಡಾ. ರಘುನಾಥರೆಡ್ಡಿ ಆರ್. ಎಲ್, ಡಾ. ಸಂತೋಷ್ ಹೆಚ್. ಎಂ. ಬಾಗವಹಿಸಿ ರಾಗಿ ಬೆಳೆಯ ನೂತನ ತಳಿ ಪರಿಚಯ, ಪೀಡೆ ನಿರ್ವಹಣೆ, ಮಣ್ಣು ಪರೀಕ್ಷೆ, ಜೈವಿಕ ಗೊಬ್ಬರಗಳ ಬಳಕೆ ಹಾಗೂ ಹಿಪ್ಪುನೇರಳೆ ಮರಗಳ ನಿರ್ವಹಣೆಗೆ ಸಂಬಂದಿಸಿದಂತೆ ಮಾಹಿತಿ ನೀಡಿದರು. ಸುಮಾರು 50 ರೈತರು ಗುಂಪು ಚರ್ಚೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ವಸ್ತು ಪ್ರದರ್ಶನ

ದಿನಾಂಕ 27.04.2016 ರಿಂದ 29.04.2016 ರವರೆಗೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಆಯೋಜಿಸಿದ್ದ ರಾಷ್ಟ್ರೀಯ ಹಣ್ಣಿನ ಸಂಪತ್ತು ವಸ್ತು ಪ್ರದರ್ಶನದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಶ್ರೀ ಸಾಯಿ ಬೆನಕ ಇಂಡಸ್ಟ್ರೀಸ್ ಭಾಗವಹಿಸಿ ವಸ್ತುಪ್ರದರ್ಶನದ ಮಳಿಗೆಯಲ್ಲಿ ಹಲಸಿನ ಜಾಮ್, ಹಲಸಿನ ಸ್ಕ್ವಾಷ್, ಹಲಸಿನ ಹಲ್ವ, ಹಲಸಿನ ಪಿಂಗರ್‌ಚಿಪ್ಸ್ ಇತರೆ ಮೌಲ್ಯವರ್ದಿತ ಪದಾರ್ಥಗಳನ್ನು ಪ್ರದರ್ಶಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ಕೋಲಾರದ ತೋಟಗಾರಿಕೆ ವಿಜ್ಞಾನಿಗಳಾದ ಡಾ. ಕೆ. ಎಸ್. ನಾಗರಾಜ ಮತ್ತು ಶ್ರೀ ಸಾಯಿ ಬೆನಕ ಇಂಡಸ್ಟ್ರೀಸ್ ಶ್ರೀಮತಿ ಲೀಲಾವತಿರವರು ಭಾಗವಹಿಸಿ ಹಲಸು ಪದಾರ್ಥಗಳ ತಯಾರಿಕೆ ಮತ್ತು ಅದರ ಉಪಯೋಗಗಳ ಬಗ್ಗೆ ಮಾಹಿತಿಯನ್ನು ತಿಳಿಸಿಕೊಟ್ಟರು. ಇದೆ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರ ಕೋಲಾರದ ವಸ್ತು ಪ್ರದರ್ಶನ ಮಳಿಗೆಗೆ **"ಉತ್ತಮ ಮಳಿಗೆ"** ಎಂದು ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.





## ಪದ್ಧತಿ ಪ್ರಾತ್ಯಕ್ಷಿಕೆ



ಮುಳಬಾಗಿಲು ತಾಲೂಕಿನ ಉತ್ತನೂರು ಗ್ರಾಮದಲ್ಲಿ ದಿನಾಂಕ 28.05.2016 ರಂದು ರೇಷ್ಮೆ ಬೆಳೆಗಾರರಿಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ **"ಮಣ್ಣು ಪರೀಕ್ಷೆಗೆ ಮಣ್ಣಿನ ಮಾದರಿಗಳನ್ನು ಸಂಗ್ರಹಿಸುವ ವಿಧಾನ"** ಪದ್ಧತಿ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ರೇಷ್ಮೆಕೃಷಿ ವಿಷಯ ತಜ್ಞರಾದ ಡಾ. ಕೆ.ಆರ್. ಶಶಿಧರ್ ಹಾಗೂ ತಂತ್ರಜ್ಞರಾದ ಡಾ. ಸಂತೋಷ್ ಹೆಚ್.ಎಂ ಮತ್ತು ಉಮೇಶ್‌ನಾಯ್ಕರವರು ಭಾಗವಹಿಸಿ ಮಣ್ಣು ಪರೀಕ್ಷೆಗೆ ಮಣ್ಣಿನ ಮಾದರಿಗಳನ್ನು ಸಂಗ್ರಹಿಸುವ ವಿಧಾನಗಳ ಬಗ್ಗೆ ಪ್ರತ್ಯಾಕ್ಷಿಕೆಯ ಮೂಲಕ ರೈತರಿಗೆ ತೋರಿಸಿಕೊಟ್ಟರು. ಸದರಿ ಗ್ರಾಮದ ರೇಷ್ಮೆ ಬೆಳೆಗಾರರು ಕಾರ್ಯಕ್ರಮದಲ್ಲಿ ಹಾಜರಿದ್ದು ಇದರ ಸದುಪಯೋಗವನ್ನು ಪಡೆದುಕೊಂಡರು.

## ಕ್ಷೇತ್ರೋತ್ಸವ

ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಮುಂಚೂಣಿ ಪ್ರಾತ್ಯಕ್ಷಿಕೆ ಮತ್ತು ತಂತ್ರಜ್ಞಾನ ಮರುಪರಿಶೀಲನೆ ಪೂರ್ಣಗೊಳಿಸಿದ ಗ್ರಾಮಗಳಲ್ಲಿ ಈ ಕೆಳಕಂಡ ತಾಂತ್ರಿಕತೆಗಳ ಬಗ್ಗೆ ಕ್ಷೇತ್ರೋತ್ಸವಗಳನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮಗಳಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮುಖ್ಯಸ್ಥರಾದ ಕೆ. ತುಳಸಿರಾಮ್, ವಿಷಯ ತಜ್ಞರಾದ ಡಾ. ರಘುನಾಥರೆಡ್ಡಿ ಆರ್. ಎಲ್, ಡಾ. ಶಶಿಧರ್ ಕೆ.ಆರ್, ಡಾ. ಸಂತೋಷ್ ಹೆಚ್. ಎಂ. ಬಾಗವಹಿಸಿ ರೈತರಿಗೆ ನೂತನ ತಾಂತ್ರಿಕತೆಗಳಿಂದ ಆಗುವ ಉಪಯೋಗಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ 70 ರೈತರು ಹಾಜರಿದ್ದು ಇದರ ಸದುಪಯೋಗವನ್ನು ಪಡೆದುಕೊಂಡರು.

| ಕ್ರ.ಸಂ | ದಿನಾಂಕ | ಗ್ರಾಮ | ವಿಷಯ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|
| 1 | 14.01.2016 | ಬೂಸನಹಳ್ಳಿ | ತೊಗರಿ ಬೆಳೆಯಲ್ಲಿ ಕಾಯಿಕೊರಕ ಮತ್ತು ಗೂಡುಮಾರು ಹುಳುವಿನ ಸಮಗ್ರ ನಿರ್ವಹಣೆ | 30 |
| 2 | 11.02.2016 | ತೊರಗನದೊಡ್ಡಿ | ಹಿಪ್ಪುನೇರಳೆಯಲ್ಲಿ ಲಘು ಪೋಷಕಾಂಶ ಮತ್ತು ಎಲೆ ಸುರುಳಿಕೀಟದ ನಿರ್ವಹಣೆ | 20 |
| 3 | 12.02.2016 | ನಡುಪಳ್ಳಿ | ಗುಣಮಟ್ಟದ ಗೂಡು ಉತ್ಪಾದನೆಯಲ್ಲಿ ಚಂದ್ರಿಕೆಗಳ ಮಹತ್ವ | 20 |







## ಅಭಿವಂದನೆ



ಡಾ. ಎ.ಬಿ. ಪಾಟೀಲರವರು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ವಿಸ್ತರಣಾ ನಿರ್ದೇಶಕರಾಗಿ ದಿನಾಂಕ 27.05.2013 ರಿಂದ 17.06.2016 ರವರೆಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ದಿನಾಂಕ 18.06.2016 ರಿಂದ ಕುಲಸಚಿವರಾಗಿ ಉನ್ನತ ಹುದ್ದೆಯನ್ನು ಅಲಂಕರಿಸಿರುತ್ತಾರೆ. ಸದರಿಯವರು ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಅಭಿವೃದ್ಧಿಗೆ ನೀಡಿದ ಅಪಾರ ಸೇವೆಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತೇವೆ.

## ಅಭಿನಂದನೆ



ಡಾ. ವೈ.ಕೆ. ಕೋಟಿಕಲ್‌ರವರು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಡೀನ್ (ವಿದ್ಯಾರ್ಥಿ ಕಲ್ಯಾಣ)ರಾಗಿ ಕಾರ್ಯ ನಿರ್ವಹಿಸಿ ದಿನಾಂಕ 17.06.2016 ರಿಂದ ವಿಸ್ತರಣಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದು, ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು. ಸದರಿಯವರ ಮಾರ್ಗದರ್ಶನದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಮತ್ತು ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಸ್ತರಣಾ ಚಟುವಟಿಕೆಗಳು ಹೆಚ್ಚು ಪ್ರಗತಿ ಸಾಧಿಸಲೆಂದು ಹಾರೈಸುತ್ತೇವೆ.


ಸಂಪಾದಕರು : ಕೆ. ತುಳಸಿರಾಮ್
ಸಹ ಸಂಪಾದಕರು : ಡಾ. ಶಶಿಧರ್ ಕೆ. ಆರ್.
ಸಹಾಯಕ ಸಂಪಾದಕರು : ಡಾ. ರಘುನಾಥರೆಡ್ಡಿ ಆರ್. ಎಲ್.
ಡಾ. ನಾಗರಾಜ ಕೆ. ಎಸ್.
ಡಾ. ಚಿಕ್ಕಣ್ಣ ಜಿ. ಎಸ್.
ಡಾ. ಸಂತೋಷ್ ಹೆಚ್. ಎಂ.
ಉಮೇಶ್ ನಾಯ್ಕ
ಪುಟ ವಿನ್ಯಾಸ : ಸಿ.ಎಸ್. ಜ್ಞಾನಸುಧ

ಪ್ರಕಾಶಕರು :
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ–563 103





**ಪ್ರತಿ ಸೋಮವಾರ – ರೈತರಿಗೆ ಪರಿಹಾರ**
ಸ್ಥಳ : ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ
ಕೃಷಿ ವಿಜ್ಞಾನ ಕೇಂದ್ರ, ಕೋಲಾರ
ಸಮಯ : ಬೆಳಗ್ಗೆ 9.30 ರಿಂದ ಸಂಜೆ 4.30